ಕೊಪ್ಪಳ ತಾಲ್ಲೂಕಿನಲ್ಲಿ ಏತ ನೀರಾವರಿ ಯೋಜನೆಗಳು.

227 (619)

ಶ್ರೀ. ಕರಡಿ ಸಂಗಣ್ಣ (ಕೊಪ್ಪಳ):

ಮಾನ್ಯ ಸಣ್ಣ ನೀರಾವರಿ ಮತ್ತು ಅಂತರಜಲ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) ಕೊಪ್ಪಳ ತಾಲ್ಲೂಕಿನಲ್ಲಿ ಹಾಲಿ ಚಾಲ್ತಿಯಲ್ಲಿರುವ ನೀರಾವರಿ ಯೋಜನೆಗಳು ಸಂಪೂರ್ಣವಾಗಿ ಕಾರ್ಯನಿರ್ವಹಿಸದೇ ಇರುವ ವಿಚಾರವು ಸರ್ಕಾರದವರ ಗಮನಕ್ಕೆ ಬಂದಿದೆಯೇ;

(ಆ) ಗಮನಕ್ಕೆ ಬಂದಿದ್ದಲ್ಲಿ ಹೆಚ್ಚುವರಿ ಪಂಪ್‌ಗಳು ಟ್ರಾನ್ಸ್‌ಫಾರಂಗಳು, ರಸ್ತೆದುರಸ್ತಿ ಹಾಗೂ ಚಾನಲ್‌ಗಳ ದುರಸ್ತಿಯನ್ನು ಜರೂರಾಗಿ ಮಾಡಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ.ತಿಪ್ಪೇಸ್ವಾಮಿ, (ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು.)

(ಅ) ಬಂದಿದೆ.

(ಆ) ಹೌದು, ಈ ವಿಷಯಕ್ಕೆ ಸಂಬಂದಿಸಿದಂತೆ ಹಂತ ಹಂತವಾಗಿ ಅನುದಾನಕ್ಕನುಗುಣವಾಗಿ ಹೆಚ್ಚುವರಿ ಪಂಪ್‌ಗಳು, ರಸ್ತೆ ದುರಸ್ತಿ ಹಾಗೂ ಚಾನಲ್‌ಗಳ ದುರಸ್ತಿಯನ್ನು ಮಾಡುವ ಬಗ್ಗೆ ಕ್ರಮ ಕೈಗೊಳ್ಳಲಾಗುತ್ತಿದೆ.

ಸವಣೂರಿನಲ್ಲಿ ವಿದ್ಯುತ್ ಸ್ಟೇಷನ್ ಕಾರ್ಯಾಗಾರ ಸ್ಥಾಪನೆ.

232 (151) ಶ್ರೀ. ಮಂಜುನಾಥ.ಸಿ. ಕುನ್ನೂರ (ಶಿಗ್ಗಾಂವ್):

ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) ಸವಣೂರಿನಲ್ಲಿ 110 ಕೆ.ವಿ. ಸ್ಟೇಷನ್ ಎಂದು ಮಂಜೂರಾಯಿತು;

(ಆ) ಈ ಯೋಜನೆಯ ಅಂದಾಜು ವೆಚ್ಚ ಹಾಗೂ ಯೋಜನಾ ನಕ್ಷೆ ಒದಗಿಸಲಾಗುವುದೇ;

(ಇ) ಈ ಯೋಜನೆಯ ಕಾಮಗಾರಿಯನ್ನು ಎಂದು ಪ್ರಾರಂಭ ಮಾಡಲಾಗಿದೆ, ಹಾಗೂ ಯಾವ ಯಾವ ಕಾಮಗಾರಿಗಳನ್ನು ಮಾಡಲಾಗಿದೆ. ಅದಕ್ಕೆ ತಗಲಿದ ಖರ್ಚು ಎಷ್ಟು;

(ಈ) ಈ ಯೋಜನೆಯನ್ನು ನವೆಂಬರ್ 96 ರೊಳಗಾಗಿ ಮುಗಿಸುವುದಾಗಿ ಭರವಸೆ ನೀಡಿರುವುದು ನಿಜವೇ? ಹಾಗಿದ್ದಲ್ಲಿ ವಿಳಂಬವಾಗಲು ಕಾರಣವೇನು;

(ಉ) ಸದರಿ ಯೋಜನೆಯನ್ನು ಸಂಪೂರ್ಣವಾಗಿ ಮುಗಿಸಿ ಎಂದು ಕಾರ್ಯಗತ ಮಾಡಲಾಗುವುದು?

ಶ್ರೀ.ಶರಣ ಬಸಪ್ಪ ದರ್ಶನಾಪುರ (ಇಂಧನ ರಾಜ್ಯ ಸಚಿವರು.)

(ಅ) ಈ ಯೋಜನೆಗೆ ಆಡಳಿತಾತ್ಮಕ ಮಂಜೂರಾತಿಯನ್ನು ಅಕ್ಟೋಬರ್ 1995 ರಲ್ಲಿ ನೀಡಲಾಗಿದೆ.

(ಆ) ಇದರ ಅಂದಾಜು ವಿವರಗಳು ಕೆಳಕಂಡಂತಿದೆ.

110 ಕೆ.ವಿ. ಲೈನಿನ ನಿರ್ಮಾಣದ ಅಂದಾಜು ವೆಚ್ಚ.	ರೂ: 180.30 ಲಕ್ಷಗಳು
110 ಕೆ.ವಿ. ಸ್ಟೇಷನ್ ನಿರ್ಮಾಣದ ಅಂದಾಜು ವೆಚ್ಚ.	ರೂ: 551.37 ಲಕ್ಷಗಳು
	ಒಟ್ಟು ರೂ: 731.67 ಲಕ್ಷಗಳು